16 ಪಟ್ಟಣಗಳು – ₹ 10.00 ಕೋಟಿಗಳು

ಆ) ನೀರು ಸರಬರಾಜು ವ್ಯವಸ್ಥೆ ಅನುಷ್ಠಾನಕ್ಕೆ 2014–15ನೇ ಸಾಲಿನಲ್ಲಿ ಈವರೆಗೆ ಆಗಿರುವ ವೆಚ್ಚ:

ಎನ್.ಕೆ.ಯು.ಎಸ್.ಐ.ಪಿ. – ₹ 109.47 ಕೋಟಿಗಳು

ಕೆ.ಎಂ.ಆರ್.ಪಿ – ₹ 15.22 ಕೋಟಿಗಳು

16 ಪಟ್ಟಣಗಳು – ನೀರು ಸರಬರಾಜು ವ್ಯವಸ್ಥೆ ಅನುಷ್ಠಾನಕ್ಕೆ ವಿಸ್ತೃತ ಯೋಜನಾ ವರದಿಗಳಿಗೆ (DPR) ತಾಂತ್ರಿಕ ಅನುಮೋದನೆ ಪಡೆಯುವ ಹಂತದಲ್ಲಿದ್ದು ಶೀಘ್ರವಾಗಿ ಯೋಜನೆಯನ್ನು ಅನುಷ್ಠಾನಗೊಳಿಸಲು ಕ್ರಮವಹಿಸಲಾಗುವುದು. ಇದುವರೆಗೂ ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ.

ಇ) ನೀರು ಸರಬರಾಜು ವ್ಯವಸ್ಥೆ ಅನುಷ್ಠಾನಕ್ಕೆ 2014–15 ನೇ ಸಾಲಿನಲ್ಲಿ ಅನುದಾನದ ಅವಶ್ಯಕತೆ:

ಎನ್.ಕೆ.ಯು.ಎಸ್.ಐ.ಪಿ. – ₹ 67.80 ಕೋಟಿಗಳು

ಕೆ.ಎಂ.ಆರ್.ಪಿ – ₹ 29.63 ಕೋಟಿಗಳು

16 ಪಟ್ಟಣಗಳು – ಈ ಹಂತದಲ್ಲಿ ಹೆಚ್ಚುವರಿ ಅನುದಾನದ ಅವಶ್ಯಕತೆ ಇರುವುದಿಲ್ಲ.

ಶಿಸ್ತು ಕ್ರಮ ಜರುಗಿಸುವುದು

1156 (1605); ಡಾ॥ ಗುರುಪಾದಪ್ಪ ನಾಗಮಾರಪಳ್ಳಿ (ಬೀದರ್)

(ಅ) ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಪತ್ತೆಯಾಗಿದ್ದ ಅಕ್ರಮ ಗಣಿಗಾರಿಕೆಗಳ ಬಗ್ಗೆ ಹಿಂದಿನ ಲೋಕಾಯುಕ್ತರು ಸರ್ಕಾರಕ್ಕೆ ಸಲ್ಲಿಸಿರುವ ವರದಿಯಲ್ಲಿ ಹೆಸರಿಸಲಾಗಿರುವ ಐ.ಎ.ಎಸ್., ಐ.ಪಿ.ಎಸ್. ಮತ್ತು ಐ.ಎಫ್.ಎಸ್., ಅಧಿಕಾರಿಗಳಾರು; (ಹೆಸರು ಸಮೇತ ವಿವರ ನೀಡುವುದು);

(ಆ) ಈ ಅಧಿಕಾರಿಗಳ ಮೇಲಿರುವ ಆರೋಪಗಳೇನು; ಇವರುಗಳಿಂದ ರಾಜ್ಯದ ಬೊಕ್ಕಸಕ್ಕೆ ಆಗಿರುವ ನಷ್ಟವೆಷ್ಟು; ಈಗ ಈ ಅಧಿಕಾರಿಗಳು ಎಲ್ಲೆಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ; (ಪ್ರತಿಯೊಬ್ಬ ಅಧಿಕಾರಿಯ ಬಗ್ಗೆ ಪೂರ್ಣ ವಿವರ ಒದಗಿಸುವುದು);

(ಇ) ಸರ್ಕಾರ ಇಲ್ಲಿಯವರೆವಿಗೆ ಯಾವ ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮ ಕೈಗೊಂಡಿದೆ; ಎಷ್ಟು ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ;

(ಈ) ಹಿಂದಿನ ಲೋಕಾಯುಕ್ತರು ಶಿಫಾರಸ್ಸು ಮಾಡಿರುವ ಎಲ್ಲಾ ಅಧಿಕಾರಿಗಳ ಮೇಲೆ ಸರ್ಕಾರ ಶಿಸ್ತಿನ ಕ್ರಮ ಕೈಗೊಳ್ಳುವುದೇ?

ಶ್ರೀ ಸಿದ್ದರಾಮಯ್ಯ (ಮುಖ್ಯ ಮಂತ್ರಿಗಳು)

(ಅ) **ಮತ್ತು (ಆ)** ವಿವರಗಳನ್ನು ಅನುಬಂಧ–1ರಲ್ಲಿ ನೀಡಲಾಗಿದೆ.

(ಇ) **ಮತ್ತು (ಈ)** ವಿವರಗಳನ್ನು ಅನುಬಂಧ–2ರಲ್ಲಿ ನೀಡಲಾಗಿದೆ.

ಅನುಬಂಧ-1

ಐ ಎ ಎಸ್ ಅಧಿಕಾರಿಗಳು:

ಮಾನ್ಯ ಕರ್ನಾಟಕ ಲೋಕಾಯುಕ್ತರವರು ಅಕ್ರಮ ಗಣಿಗಾರಿಕೆ ಬಗ್ಗೆ ಸಲ್ಲಿಸಲಾಗಿದ್ದ ವರದಿಯಲ್ಲಿನ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸುವ ಬಗ್ಗೆ ಪರಿಶೀಲಿಸಲು ರಚಿಸಲಾಗಿದ್ದ ಉನ್ನತ ಮಟ್ಟದ ಅಧಿಕಾರಿಗಳ ಸಮಿತಿಯ ಶಿಫಾರಸ್ಸಿನ ಮೇರೆಗೆ ಕೆಳಕಂಡ ಅಧಿಕಾರಿಗಳ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳಲಾಗಿದೆ.

1 ಶ್ರೀ ಗಂಗಾ ರಾಮ್ ಬಡೇರಿಯ, ಐ.ಎ ಎಸ್ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ್ದ ಅವಧಿಯಲ್ಲಿ ಮೆ ಜಂತಕಲ್ಲು ಗಣಿ ಗುತ್ತಿಗೆ ಸಂಬಂಧ ಖನಿಜಗಳ ಸಾಗಾಣಿಕೆಗೆ ಪರವಾನಿಗೆಯನ್ನು ನೀಡಲು ಅನುಮತಿಸಿರುವುದು, ನೈಸರ್ಗಿಕ ಸಂಪತ್ತನ್ನು ಕಾಪಾಡಲು ವಿಫಲ ಹಾಗೂ ನಕಲಿ ಪರವಾನಗಿ ಉಪಯೋಗಿಸಿಕೊಳ್ಳಲು ಮತ್ತು ಅಕ್ರಮ ಗಣಿಗಾರಿಕೆ ತಡೆಯಲು ವಿಫಲ ಮತ್ತು ಮೆ ಸ್ವಾರ್ಕ್‌ಲೈನ್ ಮತ್ತು ಮೆ ಕಾರ್ತಿಕೇಯನ್ ಇವರುಗಳಿಗೆ ಗಣಿಗುತ್ತಿಗೆ ಮಂಜೂರಾತಿಗಾಗಿ ಸರ್ಕಾರಕ್ಕೆ ಶಿಫಾರಸ್ಸು ಮಾಡಿಸಲು ಕಾರಣಕರ್ತರು, ನಿಯಮಗಳ ಉಲ್ಲಂಘನೆ

ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ವಿವರ ಸರ್ಕಾರದ ಕಾರ್ಯದರ್ಶಿ (ಪಂಚಾಯತ್ ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.

2. ಶ್ರೀ ಕೆ ಎಸ್. ಪ್ರಭಾಕರ್, ಐ ಎ ಎಸ್(ನಿವೃತ್ತ) ಗಣಿ ಮತ್ತು ಭೂವಿಜ್ಞಾನ ಇಲಾಖೆಯ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ್ದ ಅವಧಿಯಲ್ಲಿ ಮೆ. ಸಾಯಿ ವೆಂಕಟೇಶ್ವರ ಮಿನರಲ್ಸ್ ರವರ ಗಣಿ ಗುತ್ತಿಗೆ ಮೂಲ ಅರ್ಜಿಯ ಬದಲು ನಕಲು ಅರ್ಜಿ ಸೇರ್ಪಡೆಗೆ ಕಾರಣಕರ್ತರು, ನೈಸರ್ಗಿಕ ಸಂಪತ್ತನ್ನು ಕಾಪಾಡಲು ವಿಫಲ ಹಾಗೂ ನಕಲಿ ಪರವಾನಗಿ ಉಪಯೋಗಿಸಿಕೊಳ್ಳಲು ಮತ್ತು ಅಕ್ರಮ ಗಣಿಗಾರಿಕೆ ತಡೆಯಲು ವಿಫಲ, ಮೆ ಸ್ವಾರ್ಕ್‌ಲೈನ್ ಮತ್ತು ಮೆ ಕಾರ್ತಿಕೇಯನ್ ಇವರುಗಳಿಗೆ ಗಣಿಗುತ್ತಿಗೆ ಅಮಲ್ದಾರಿಗೆ ಕಾರಣಕರ್ತರು, ಶ್ರೀ ರಾಮೆ ರಾವ್ ಪೋಳ್ ರವರಿಗೆ ಗಣಿಗುತ್ತಿಗೆ ಮಂಜೂರಾತಿ ಸಂಬಂಧ ಸರ್ಕಾರಕ್ಕೆ ತಪ್ಪು ಮಾಹಿತಿ ನೀಡಿರುವುದು ಮತ್ತು ಮೆ ಹನುಮಾನ್ ಮೈನ್ಸ್ ಅವಧಿ ಚಾಲ್ತಿಯಲ್ಲಿರುವಾಗಲೇ ನಿಯಮಬಾಹಿರವಾಗಿ ತಾತ್ಕಾಲಿಕ ಕಾರ್ಯಾನುಮತಿ ನೀಡಿರುವುದು, ಪ್ರಸ್ತುತ ಸೇವೆಯಿಂದ ನಿವೃತ್ತ

3 ಶ್ರೀ ಎಂ.ಈ ಶಿವಲಿಂಗಮೂರ್ತಿ, ಐ ಎ ಎಸ್(ನಿವೃತ್ತ) ಗಣಿ ಮತ್ತು ಭೂವಿಜ್ಞಾನ ಇಲಾಖೆಯ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ್ದ ಅವಧಿಯಲ್ಲಿ ಮೆ ಎ ಎಂ ಸಿ ಗಣಿಗುತ್ತಿಗೆ ನವೀಕರಣ ಸಂಬಂಧ ಐ ಬಿ ಎಂ ಗೆ ತಪ್ಪು ಮಾಹಿತಿ ನೀಡಿರುವುದು, ಮೆ ಎ ಎಂ.ಸಿ ಸಂಸ್ಥೆಯಲ್ಲಿ ಹೊಸ ಪಾಲುದಾರರ ಸೇರ್ಪಡೆಯನ್ನು ಒಪ್ಪಿಕೊಂಡು ನಿಯಮ ಬಾಹಿರವಾಗಿ ಖನಿಜಗಳ ಸಾಗಾಣಿಕೆಗೆ ಪರವಾನಿಗೆ ನೀಡಲು ಅನುಮತಿಸಿರುವುದು, ನೈಸರ್ಗಿಕ ಸಂಪತ್ತನ್ನು ಕಾಪಾಡಲು ವಿಫಲ, ಕೆ ಎಸ್ ಎಲ್ ಸ್ವಾಮಿ, ಕೆ ಕುಮಾರ್ ಮತ್ತು ಎಂ ಮಾಬು ಸಾಬ್ ಇವರುಗಳಿಗೆ ಗಣಿಗುತ್ತಿಗೆ ಮಂಜೂರಾತಿಗೆ ಶಿಫಾರಸ್ಸಿನಲ್ಲಿ ಅಕ್ರಮಗಳು ಮತ್ತು ಶ್ರೀ ರಾಮ್ ರಾವ್ ಪೋಳ್ ರವರಿಗೆ ಗಣಿಗುತ್ತಿಗೆ ಅಮಲ್ದಾರಿಯಲ್ಲಿ ತಪ್ಪೆಸಗಿರುವುದು, ಪ್ರಸ್ತುತ ಸೇವೆಯಿಂದ ನಿವೃತ್ತ

ಐ ಪಿ ಎಸ್ ಅಧಿಕಾರಿಗಳು:

ಮಾನ್ಯ ಕರ್ನಾಟಕ ಲೋಕಾಯುಕ್ತರು ಅಕ್ರಮ ಗಣಿಗಾರಿಕೆ ಕುರಿತು ಸರ್ಕಾರಕ್ಕೆ ನೀಡಿದ ವರದಿಯಲ್ಲಿನ ಬುಕ್-14 ಚಾಪ್ಟರ್-28ರಲ್ಲಿ ನಮೂದಿಸಿರುವ ಕಾರಾಪುಡಿ ಮಹೇಶ್ ಎಂಬುವವರ ದಿನಚರಿ ಪುಸ್ತಕದ ಮೇಲೆ ಆಧರಿಸಿ ಸಿದ್ಧಪಡಿಸಲಾದ ಸರ್ಕಾರಿ ಅಧಿಕಾರಿಗಳ ಪಟ್ಟಿಯಲ್ಲಿ ಉಲ್ಲೇಖಿಸಲಾಗಿರುವ 191 ಜನ ಪೊಲೀಸ್ ಅಧಿಕಾರಿಗಳ ವಿವರಗಳನ್ನು ಪರಿಶೀಲಿಸಿ ಅದರಲ್ಲಿ 97 ಅಧಿಕಾರಿಗಳನ್ನು ಗುರುತಿಸಲಾಗಿದೆ ಎಂದು ಒಳಾಡಳಿತ ಇಲಾಖೆಯು ತಿಳಿಸಿದ್ದು, ಅದರಲ್ಲಿ ಈ ಮೂವರು ಐಪಿಎಸ್ ಅಧಿಕಾರಿಗಳ ಹೆಸರುಗಳನ್ನು ಗುರುತಿಸಲಾಗಿತ್ತು.

ಸದರಿ ಅಧಿಕಾರಿಗಳು ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ವಿವರ ಈ ಕೆಳಕಂಡಂತಿದೆ

1) ಶ್ರೀಮತಿ ಸೋನಿಯಾ ನಾರಂಗ್, ಐ ಪಿ ಎಸ್, ಎಸ್ ಪಿ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು
2) ಶ್ರೀ ಈಶ್ವರಚಂದ್ರ ವಿದ್ಯಾಸಾಗರ್, ಐ ಪಿ ಎಸ್, ಪ್ರಸ್ತುತ ಸೇವೆಯಿಂದ ನಿವೃತ್ತ
3) ಶ್ರೀ ಎಂ ಎನ್. ನಾಗರಾಜ್, ಐ ಪಿ ಎಸ್, ಎಸ್ ಪಿ, ರಾಯಚೂರು ಜಿಲ್ಲೆ

2/-

ಐ.ಎಫ್.ಎಸ್ ಅಧಿಕಾರಿಗಳು

ಮಾನ್ಯ ಕರ್ನಾಟಕ ಲೋಕಾಯುಕ್ತರವರು ಅಕ್ರಮ ಗಣಿಗಾರಿಕೆ ಬಗ್ಗೆ ಸಲ್ಲಿಸಲಾಗಿದ್ದ ವರದಿಯಲ್ಲಿನ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸುವ ಬಗ್ಗೆ ಪರಿಶೀಲಿಸಲು ರಚಿಸಲಾಗಿದ್ದ ಉನ್ನತ ಮಟ್ಟದ ಅಧಿಕಾರಿಗಳ ಸಮಿತಿಯ ಶಿಫಾರಸ್ಸಿನ ಮೇರೆಗೆ ಕೆಳಕಂಡ ಅಧಿಕಾರಿಗಳ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳಲಾಗಿದೆ:

1) ಶ್ರೀ ಎಸ್. ಮುತ್ತಯ್ಯ, ಐಎಫ್ಎಸ್:
(ದಿನಾಂಕ: 22/05/2003 ರಿಂದ 21/03/2005 ಹಾಗೂ 18/07/2008 ರಿಂದ 19/05/2010 ರವರೆಗೆ ಬಳ್ಳಾರಿ ಪ್ರಾದೇಶಿಕ ವಿಭಾಗದಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿಯಾಗಿದ್ದ ಅವಧಿ)

ಅ) ಗಣಿದಾರರಿಂದ ಅರಣ್ಯ ಅಬಿವೃದ್ಧಿ ಸುಂಕ (Forest Development Tax) ಗಳನ್ನು ಪಡೆಯಲು ವಿಫಲರಾಗಿರುವ ಬಗ್ಗೆ
ಆ) ಗುತ್ತಿಗೆ ಅವಧಿ ಮುಗಿದ ನಂತರ 18 ಫಾರಂ (Permit) ಮತ್ತು 27 ಪಾಸ್ ಬುಕ್‌ಗಳನ್ನು ವಿತರಿಸಿರುವ ಬಗ್ಗೆ
ಇ) 17 ಫಾರೆಸ್ಟ್ರ್ಸನ್ನು ನಿಯೋಜನೆ ಮೇಲೆ ಕಳುಹಿಸಿ ಫಾರಂ 27 ಪರ್ಮಿಟ್‌ಗಳನ್ನು ಸಹಿ ಮಾಡಲು ಹಾಗೂ ವಿತರಿಸಲು ಬಲವಂತ ಮಾಡಿರುವ ಬಗ್ಗೆ
ಈ) ದಾಲ್ಮಿಯ ಮೈನ್ಸ್‌ರವರ ಗಣಿಗಾರಿಕೆಗೆ ಗುತ್ತಿಗೆ ಅವಧಿ ಮುಗಿದಿದ್ದರೂ ಸಹ ಅವರಿಗೆ ಅಕ್ರಮ ಗಣಿಗಾರಿಕೆಗೆ ಅವಕಾಶ ನೀಡಿದ್ದರ ಬಗ್ಗೆ
ಉ) ಅಕ್ರಮ ಗಣಿಗಾರಿಕೆ ಮೇಲ್ವಿಚಾರಣೆ ಮಾಡಲು ವಿಫಲರಾಗಿ 54,120 ಮೆಟ್ರಿಕ್ ಟನ್ ಖನಿಜಗಳು ಕಳುವಾಗಲು ನೆರವಾದ ಬಗ್ಗೆ
ಊ) ತಪಾಸಣೆ ಹಾಗೂ ಮೇಲ್ವಿಚಾರಣೆ ಮಾಡದೆ ಅಪಾರ ಪ್ರಮಾಣದ ಕಬ್ಬಿಣದ ಅದಿರನ್ನು ಸಾಗಣೆ ಮಾಡಲು ಸಹಕರಿಸಿದ್ದಕ್ಕೆ
ಋ) ಶ್ರೀ ಕಾರಪುಡಿ ಮಹೇಶ್‌ರವರಿಗೆ ಅಧಿಕೃತ ಸಹಾಯನೀಡಿ ರೂ 2.5 ಲಕ್ಷ ಲಂಟ ಸ್ವೀಕರಿಸಿದ ಬಗ್ಗೆ

ದಿನಾಂಕ: 20/10/2011 ರಿಂದ ಅಮಾನತ್ತಿನಲ್ಲಿರುತ್ತಾರೆ (ಸಿಬಿಐ ಪ್ರಕರಣದಲ್ಲಿ)

2) ಶ್ರೀ ಮನೋಜ್ ಕುಮಾರ್ ಶುಕ್ಲ, ಐಎಫ್ಎಸ್:
(ದಿನಾಂಕ 28/09/2005 ರಿಂದ 23/06/2006 ರವರೆಗೆ ಬಳ್ಳಾರಿ ಪ್ರಾದೇಶಿಕ ವಿಭಾಗದಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿಯಾಗಿದ್ದ ಅವಧಿ ಹಾಗೂ ದಿನಾಂಕ 24/07/2008 ರಿಂದ 16/03/2011 ರ ಅವಧಿಯಲ್ಲಿ ಅರಣ್ಯ ಸಂರಕ್ಷಣಾಧಿಕಾರಿಯಾಗಿದ್ದ ಅವಧಿ)

ಅ) ಗುತ್ತಿಗೆ ಅವಧಿ ಮುಗಿದ ನಂತರ ದಾಲ್ಮಿಯ ಮೈನ್ಸ್ ಇವರಿಗೆ ಅಕ್ರಮ ಗಣಿಗಾರಿಕೆಗೆ ಅವಕಾಶ ನೀಡಿ ಕಬ್ಬಿಣದ ಅದಿರನ್ನು ಪಡೆಯಲು ಅವಕಾಶ ನೀಡಿದ್ದಕ್ಕೆ.
ಆ) ಮೆ ಬಾಲಾಜಿ ಮೈನ್ಸ್ ರವರ ಪರ ಗಣಿ ಗುತ್ತಿಗೆಗೆ NOC ನೀಡುವ ಮುನ್ನ ಸರಿಯಾಗಿ ಪರಿಶೀಲಿಸದಿರುವ ಬಗ್ಗೆ

ದಿನಾಂಕ 24/05/2013 ರಿಂದ ನ್ಯಾಯಾಂಗ ಬಂದನ ಮತ್ತು ಇದೇ ದಿನಾಂಕದಿಂದ ಅಮಾನತ್ತಿನಲ್ಲಿರುತ್ತಾರೆ (ಸಿಬಿಐ ಪ್ರಕರಣದಲ್ಲಿ)

3) ಶ್ರೀ ವಿಜಯ್ ಮೋಹನ್ ರಾಜ್, ಐಎಫ್ಎಸ್:
(ದಿನಾಂಕ 31/08/2009 ರಿಂದ 21/11/2009 ರವರೆಗೆ ಕೊಪ್ಪಳ ವಿಭಾಗದಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿಯಾಗಿದ್ದ ಅವಧಿ)

ಲೋಕಾಯುಕ್ತ ವರದಿಯ ಅಧ್ಯಾಯ 28 ಕಂಡಿಕೆ 16 ರಲ್ಲಿ ಶ್ರೀ ಕಾರಮಡಿ ಮಹೇಶ್ವರವರ ಪೆನ್ಡ್ರೈವ್‌ನಲ್ಲಿ ಅಂದಿನ ಉಪ ಅರಣ್ಯ ಸಂಕರಕ್ಷಣಾಧಿಕಾರಿ, ಕೊಪ್ಪಳ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಳಗಾವಿ ರವರುಗಳಿಗೆ ಲಂಚ ನೀಡಿದ ಬಗ್ಗೆ ಮಾಹಿತಿ ದಾಖಲಿಸಿದ್ದರ ಹಿನ್ನೆಲೆಯಲ್ಲಿ ಅಂದಿನ ಉಪ ಅರಣ್ಯ ಸಂರಕ್ಷಣಾಧಿಕಾರಿ, ಕೊಪ್ಪಳ ಹುದ್ದೆಯಲ್ಲಿದ್ದ ಶ್ರೀ ವಿಜಯ್ ಮೋಹನ್ ರಾಜ್, ಐಎಫ್ಎಸ್ ಹಾಗೂ ಅಂದಿನ ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಳಗಾವಿ ಹುದ್ದೆಯಲ್ಲಿದ್ದ ಶ್ರೀ ಗಿರೀಶ್ ಸಿ ಹೊಸೂರ್, ಐಎಫ್ಎಸ್ ರವರು ಲಂಚ ಸ್ವೀಕರಿಸಿದ ಬಗ್ಗೆ ಆರೋಪ ಮಾಡಲಾಗಿತ್ತು.

ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಹುದ್ದೆ: ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಬೆಳಗಾವಿ ವೃತ್ತ, ಬೆಳಗಾವಿ

4) ಶ್ರೀ ಗಿರೀಶ್ ಸಿ. ಹೊಸೂರ್, ಐಎಫ್ಎಸ್.
(ದಿನಾಂಕ 16/07/2008 ರಿಂದ 19/06/2010 ರವರೆಗೆ ಬೆಳಗಾವಿ ವಿಭಾಗದಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿಯಾಗಿದ್ದ ಅವಧಿ)

ಲೋಕಾಯುಕ್ತ ವರದಿಯ ಅಧ್ಯಾಯ 28 ಕಂಡಿಕೆ 16 ರಲ್ಲಿ ಶ್ರೀ ಕಾರಮಡಿ ಮಹೇಶ್ವರವರ ಪೆನ್ಡ್ರೈವ್‌ನಲ್ಲಿ ಅಂದಿನ ಉಪ ಅರಣ್ಯ ಸಂಕರಕ್ಷಣಾಧಿಕಾರಿ, ಕೊಪ್ಪಳ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಳಗಾವಿ ರವರುಗಳಿಗೆ ಲಂಚ ನೀಡಿದ ಬಗ್ಗೆ ಮಾಹಿತಿ ದಾಖಲಿಸಿದ್ದರ ಹಿನ್ನೆಲೆಯಲ್ಲಿ ಅಂದಿನ ಉಪ ಅರಣ್ಯ ಸಂರಕ್ಷಣಾಧಿಕಾರಿ, ಕೊಪ್ಪಳ ಹುದ್ದೆಯಲ್ಲಿದ್ದ ಶ್ರೀ ವಿಜಯ್ ಮೋಹನ್ ರಾಜ್, ಐಎಫ್ಎಸ್ ಹಾಗೂ ಅಂದಿನ ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಳಗಾವಿ ಹುದ್ದೆಯಲ್ಲಿದ್ದ ಶ್ರೀ ಗಿರೀಶ್ ಸಿ ಹೊಸೂರ್, ಐಎಫ್ಎಸ್ ರವರು ಲಂಚ ಸ್ವೀಕರಿಸಿದ ಬಗ್ಗೆ ಆರೋಪ ಮಾಡಲಾಗಿತ್ತು.

ಮೂಲತ ಹಿಮಾಚಲ ಪ್ರದೇಶ ರಾಜ್ಯದ ಕೇಡರ್ ಅಧಿಕಾರಿಯಾಗಿದ್ದು, ಕರ್ನಾಟಕ ರಾಜ್ಯ ನಿಯೋಜನೆಯಿಂದ 2012 ರಲ್ಲಿ ಹಿಂತಿರುಗಿ ಹೋಗಿರುತ್ತಾರೆ

5) ಶ್ರೀ ಶ್ರೀನಿವಾಸುಲು, ಐಎಫ್ಎಸ್:
(ದಿನಾಂಕ 23/07/2008 ರಿಂದ 31/10/2011 ರವರೆಗೆ ಚಿತ್ರದುರ್ಗ ವಿಭಾಗದಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿಯಾಗಿದ್ದ ಅವಧಿ)

ಚಿತ್ರದುರ್ಗ ಉಪ ಅರಣ್ಯ ಸಂರಕ್ಷಣಾಧಿಕಾರಿಯಾಗಿದ್ದಾಗ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಗಣಿಗಾರಿಕೆ ಸಂಬಂಧದಲ್ಲಿ ಇವರ ವಿರುದ್ಧ Strictures ಹೊರಡಿಸಿ ಅಧಿಕಾರಿಯು ಯಾವುದೇ ಆದೇಶವಿಲ್ಲದ ಮಾನ್ಯ ಉಚ್ಚ ನ್ಯಾಯಾಲಯದ ಮುಂದೆ ವರದಿ ಸಲ್ಲಿಸಿದ್ದ ಆರೋಪದ ಬಗ್ಗೆ ಕ್ರಮ ಜರುಗಿಸುವಂತೆ ನಿರ್ದೇಶನ ನೀಡಿತ್ತು.

ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಹುದ್ದೆ: ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಡೈರೆಕ್ಟರ್, ಅನ್ನಿ ದಾಂಡೇಲಿ ಟೈಗರ್ ರಿಸರ್ವ್, ದಾಂಡೇಲಿ

(ಯು ಹೆಚ್ ನಾರಾಯಣಸ್ವಾಮಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಆಸುಇ (ಸೇವೆಗಳು-1)

ಅನುಬಂಧ-2

ಐ.ಎ.ಎಸ್ ಅಧಿಕಾರಿಗಳು.

ಶ್ರೀ ಗಂಗಾ ರಾಂ ಬಡೇರಿಯ, ಐ ಎ.ಎಸ್., ಶ್ರೀ ಕೆ.ಎಸ್ ಪ್ರಭಾಕರ್, ಐ ಎ.ಎಸ್ (ನಿವೃತ್ತ) ಮತ್ತು ಶ್ರೀ ಎಂ ಈ ಶಿವಲಿಂಗಮೂರ್ತಿ, ಐ.ಎ ಎಸ್ (ನಿವೃತ್ತ)., ಇವರ ವಿರುದ್ಧ ಇಲಾಖಾ ವಿಚಾರಣೆ ಪ್ರಾರಂಭಿಸಲಾಗಿದ್ದು, ವಿಚಾರಣಾ ಪ್ರಕ್ರಿಯೆ ಪ್ರಗತಿಯಲ್ಲಿದೆ. ವಿಚಾರಣಾಧಿಕಾರಿಗಳ ವರದಿಯನ್ನು ನಿರೀಕ್ಷಿಸಲಾಗುತ್ತಿದೆ

ಐ.ಪಿ.ಎಸ್ ಅಧಿಕಾರಿಗಳು:

ಅಧಿಕಾರಿಗಳಿಂದ ವಿವರಣೆಯನ್ನು ಪಡೆದು, ವಿವರವಾಗಿ ಪರಿಶೀಲಿಸಲಾಗಿದೆ ಕಾರಾಮಡಿ ಮಹೇಶ್ ಎಂಬುವವರ ಡೈರಿಯಲ್ಲಾಗಲೀ ಅಥವಾ ಲೋಕಾಯುಕ್ತ ವರದಿಯಲ್ಲಾಗಲೀ ಈ ಅಧಿಕಾರಿಗಳ ವಿರುದ್ಧ ಸ್ಪಷ್ಟ ಮಾಹಿತಿಗಳು ಹಾಗೂ ಇವರುಗಳ ವಿರುದ್ಧದ ಆರೋಪಗಳನ್ನು ಸಾಬೀತುಪಡಿಸಲು ಇತರ ಯಾವುದೇ ಸಾಕ್ಷಿ ಪುರಾವೆಗಳು ಲಭ್ಯವಿರುವುದಿಲ್ಲ. ಈ ಹಿನ್ನೆಲೆಯಲ್ಲಿ, ಸದರಿ ಅಧಿಕಾರಿಗಳ ವಿರುದ್ಧ ಯಾವುದೇ ವಿಚಾರಣೆ ನಡೆಸುವುದು ಸೂಕ್ತವಲ್ಲವೆಂದು ತೀರ್ಮಾನಿಸಲಾಗಿದೆ

ಐ.ಎಫ್.ಎಸ್ ಅಧಿಕಾರಿಗಳು:

ಈ ಸಂಬಂಧದಲ್ಲಿ ರಚಿಸಲಾಗಿದ್ದ ಉನ್ನತ ಮಟ್ಟದ ಸಮಿತಿಯ ಶಿಫಾರಸ್ಸಿನಂತೆ ಶ್ರೀ ವಿಜಯ ಮೋಹನ್‌ರಾಜ್, ಐ ಎಫ್.ಎಸ್. ಮತ್ತು ಶ್ರೀ ಗಿರೀಶ್ ಸಿ ಹೊಸೂರ್, ಐ.ಎಫ್.ಎಸ್, ಇವರುಗಳ ವಿರುದ್ಧದ ಆರೋಪಗಳ ಬಗ್ಗೆ ತನಿಖೆ ನಡೆಸಲು ಸಿ ಓ ಡಿ ಗೆ ವಹಿಸಿದ್ದು, ಇತ್ತೀಚೆಗೆ ಸಿವಿಡಿ ತನಿಖಾ ವರದಿಯು ಸ್ವೀಕೃತವಾಗಿದ್ದು, ಸರ್ಕಾರದ ಪರಿಶೀಲನೆಯಲ್ಲಿದೆ. ಹಾಗೂ ಸದರಿ ಸಮಿತಿಯ ಶಿಫಾರಸ್ಸಿನಂತೆ ಶ್ರೀ ಶ್ರೀನಿವಾಸುಲು, ಐಎಫ್‌ಎಸ್ ಇವರ ವಿರುದ್ಧ ಯಾವುದೇ ಶಿಸ್ತು ಕ್ರಮ ಜರುಗಿಸುವ ಅಗತ್ಯವಿಲ್ಲವೆಂದು ತೀರ್ಮಾನಿಸಲಾಗಿದೆ

ಶ್ರೀ ಎಸ್ ಮುತ್ತಯ್ಯ, ಐಎಫ್‌ಎಸ್ ಮತ್ತು ಶ್ರೀ ಮನೋಜ್ ಕುಮಾರ್ ಶುಕ್ಲ, ಐಎಫ್‌ಎಸ್ ಇವರುಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಲು ರಾಜ್ಯ ಸರ್ಕಾರವು ಸಿ ಆರ್ ಪಿ ಸಿ ಅಡಿಯಲ್ಲಿ ಹಾಗೂ ರಾಜ್ಯ ಸರ್ಕಾರದ ಶಿಫಾರಸ್ಸಿನ ಮೇರೆಗೆ ಕೇಂದ್ರ ಸರ್ಕಾರವು ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆಯಡಿಯಲ್ಲಿ ಅಭಿಯೋಜನಾ ಮಂಜೂರಾತಿಯನ್ನು ನೀಡಲಾಗಿರುತ್ತದೆ ಮುಂದುವರೆದು, ಇವರುಗಳ ವಿರುದ್ಧ ಇಲಾಖಾ ವಿಚಾರಣೆಯನ್ನೂ ಸಹ ಪ್ರಾರಂಭಿಸಲಾಗಿದ್ದು, ಪ್ರಗತಿಯಲ್ಲಿದೆ

ಲೋಕಾಯುಕ್ತ ವರದಿಯಲ್ಲಿ ಹೆಸರಿಸಲಾಗಿರುವ ಅದಿಕಾರಿಗಳ ಪೈಕಿ ಶಿಸ್ತಿನ ಕ್ರಮ ಅಗತ್ಯವೆಂದು ನಿರ್ಣಯಿಸಲಾಗಿರುವ ಎಲ್ಲಾ ಅದಿಕಾರಿಗಳ ವಿರುದ್ಧ ಕ್ರಮ ಜರುಗಿಸಲಾಗಿದ್ದು, ಶಿಸ್ತಿನ ಕ್ರಮದ ಪ್ರಕ್ರಿಯೆ ವಿವಿಧ ಹಂತದಲ್ಲಿದೆ

(ಯು ಹೆಚ್. ನಾರಾಯಣಸ್ವಾಮಿ)
ಸರ್ಕಾರದ ಅಡೀನ ಕಾರ್ಯದರ್ಶಿ
ಸಿಆಸುಇ (ಸೇವೆಗಳು-1)